**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018. ದೂರವಾಣಿ: 080–26701303

# ೨೯.೦೨.೨೦೧೨ರಂದು ನಡೆದ ಪ್ರಶಾಸನ ಸಮಿತಿಯ ೩ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ ೩ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಫೆಬ್ರವರಿ ೨೯, ೨೦೧೨ರ ಬುಧವಾರ ಮಧ್ಯಾಹ್ನ ೦೨.೩೦ ಗಂಟೆಗೆ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಪಂ. ಜಯತೀರ್ಥಾಚಾರ್ಯ ಮಳಗಿ,** ಧಾರವಾಡ | ಸದಸ್ಯರು |
| ೩. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೪. | **ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು,** ಕವಲೇದುರ್ಗ | ಸದಸ್ಯರು |
| ೫. | **ಡಾ. ಎಚ್.ಆರ್. ವಿಶ್ವಾಸ್,** ಮಂಗಳೂರು | ಸದಸ್ಯರು |
| ೬. | **ಡಾ. ಪಿ.ಬಿ. ಸಂತಪ್ಪನವರ,** ಗುಲಬರ್ಗಾ | ಸದಸ್ಯರು |
| ೭. | **ಶ್ರೀ ಜಿ. ಹನುಮಂತರಾಯಪ್ಪ,** ತುಮಕೂರು | ಸದಸ್ಯರು |
| ೮. | **ಡಾ. ಟಿ.ಎಸ್. ಸತ್ಯವತಿ,** ಬೆಂಗಳೂರು | ಸದಸ್ಯರು |
| ೯. | **ಶ್ರೀ ಡಿ. ಸುರೇಂದ್ರಕುಮಾರ್,** ಬೆಂಗಳೂರು | ಸದಸ್ಯರು |
| ೧೦. | **ಡಾ. ಶ್ರೀನಿವಾಸ ವರಖೇಡಿ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೧೧. | **ಪ್ರೊ. ವೈ.ಎಸ್. ಸಿದ್ದೇಗೌಡ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಪ್ರಧಾನ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಸರ್ಕಾರದ ಕಾರ್ಯದರ್ಶಿಗಳು,** ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು | ಸದಸ್ಯರು |
| ೪. | **ಉಪ ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಬೆಂಗಳೂರು | ಸದಸ್ಯರು |
| ೫. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |

ಸಭೆಯು ಉನ್ನತ ಶಿಕ್ಷಣ ಸಚಿವರಾಗಿದ್ದ ಡಾ. ವಿ.ಎಸ್. ಆಚಾರ್ಯ ಅವರ ನಿಧನಕ್ಕೆ ಸಂತಾಪ ಸೂಚಿಸಿ ಎರಡು ನಿಮಿಷಗಳ ಮೌನವನ್ನು ಆಚರಿಸಿತು. ಅನಂತರ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಎರಡನೆಯ ಪ್ರಶಾಸನ ಸಮಿತಿ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 20.01.2011ರಂದು ನಡೆದ ವಿಶ್ವವಿದ್ಯಾಲಯದ ಎರಡನೆಯ ಪ್ರಶಾಸನ ಸಮಿತಿ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.

**ವಿಷಯ ಸಂಖ್ಯೆ 2 ಮತ್ತು 3ಕ್ಕೆ** ಸಂಬಂಧಿಸಿದಂತೆ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು ನಿರೀಕ್ಷಿಸಲಾಗುತ್ತಿದೆ. 50 ಲಕ್ಷ ರೂ.ಗಳನ್ನು ಅನುದಾನವಾಗಿ ನೀಡಬೇಕೆಂದು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. **ವಿಷಯ ಸಂಖ್ಯೆ 4ಕ್ಕೆ** ಸಂಬಂಧಿಸಿದಂತೆ ಮಾನ್ಯ ಕುಲಪತಿಗಳು 2010ರ ಜೂನ್ ತಿಂಗಳಿನಿಂದ ಅನ್ವಯವಾಗುವಂತೆ 5,000/– ರೂ.ಗಳನ್ನು ಮಾತ್ರ ಗೃಹ ಕಛೇರಿ ವೆಚ್ಚಕ್ಕಾಗಿ ಪಡೆದಿದ್ದಾರೆ. ಸಭೆಯಲ್ಲಿ ನಿರ್ಣಯವಾದಂತೆ 10,000/– ರೂ.ಗಳನ್ನು ಪಡೆದಿಲ್ಲ. ಈ ಸಂಬಂಧವಾಗಿ ಸಮಿತಿಯ ಸದಸ್ಯರಾದ ಡಾ. ಪಿ.ಬಿ. ಸಂತಪ್ಪನವರ ಬರೆದ ಪತ್ರವನ್ನು ಮಾನ್ಯರ ಅವಗಾಹನೆಗೆ ತರಲಾಗಿದೆ. ಉಳಿದ ಯಾವ ಸದಸ್ಯರಿಂದ ಹಾಗೂ ಸರ್ಕಾರದಿಂದ ಈ ಬಗ್ಗೆ ಆಕ್ಷೇಪ ಬರದೇ ಇರುವುದರಿಂದ ಪ್ರಶಾಸನ ಸಮಿತಿ ಸಭೆಯ ಸೂಚನಾಕ್ರಮವನ್ನು ವಹಿಸಲಾಗಿದೆ. **ವಿಷಯ 5ಕ್ಕೆ** ಸಂಬಂಧಿಸಿದಂತೆ ಸಮವಸ್ತ್ರಗಳನ್ನು ಜನತಾ ಬಜಾರಿನಿಂದ ತಂದು ವಾಹನ ಚಾಲಕರಿಗೆ ನೀಡಲಾಗಿದೆ. **ವಿಷಯ 6ಕ್ಕೆ** ಸಂಬಂಧಿಸಿದಂತೆ ಪ್ರಸ್ತಾವವನ್ನು ಸರ್ಕಾರಕ್ಕೆ ಕಳುಹಿಸಲಾಗಿದೆ. **ವಿಷಯ 7ಕ್ಕೆ** ಸಂಬಂಧಿಸಿದಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಹಾಗೂ ಬಾಡಿಗೆ ವಾಹನವನ್ನು ತೆಗೆದುಕೊಳ್ಳಲು ಕ್ರಮವಹಿಸಲಾಗಿದೆ. **ವಿಷಯ 9ಕ್ಕೆ** ಸಂಬಂಧಿಸಿದಂತೆ ವಿದ್ವಾನ್ ಕೆ. ಗಂಗಣ್ಣ ಅವರ ಮನವಿಯನ್ನು ಸೂಕ್ತವಾಗಿ ಪರಿಶೀಲಿಸಿ ಕಾರ್ಯದ ಅಗತ್ಯತೆ ಹಿನ್ನೆಲೆಯಲ್ಲಿ 12,000/– ರೂ.ಗಳ ಕ್ರೋಢೀಕೃತ ವೇತನಕ್ಕೆ ಕ್ರಮವಹಿಸಲಾಗಿದೆ. **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳಲ್ಲಿ ವಿಷಯ 1ಕ್ಕೆ** ಸಂಬಂಧಿಸಿದಂತೆ ಪಿಎಚ್.ಡಿ. ಮತ್ತು ಎಂ.ಫಿಲ್. ಪದವಿಗಳಿಗೆ ಸಂಬಂಧಿಸಿದಂತೆ ಸಮಿತಿ ಸಭೆಯನ್ನು ಕರೆದು

ಅಂತಿಮಗೊಳಿಸಲಾಗಿದೆ. **ವಿಷಯಕ್ಕೆ 3ಕ್ಕೆ** ಸಂಬಂಧಿಸಿದಂತೆ ವಿದ್ವಾನ್ ಎಸ್.ಎನ್. ಸಂಪತ್ಕುಮಾರ್ ಅವರನ್ನು ಪರೀಕ್ಷಾಂಗ ವಿಭಾಗದಲ್ಲಿ ಹೆಚ್ಚುವರಿ ಕಾರ್ಯನಿಯೋಜನೆಯೊಂದಿಗೆ ಸಹಾಯಕ ಕುಲಸಚಿವರಾಗಿ ಕಾರ್ಯನಿರ್ವಹಿಸಲು ಪ್ರತಿನಿಯೋಜನೆ ಮೇಲೆ ತೆಗೆದುಕೊಳ್ಳಲಾಗಿದೆ. **ವಿಷಯ 4ಕ್ಕೆ** ಸಂಬಂಧಿಸಿದಂತೆ 28.01.2012ರಂದು ಸಭೆ ಸೇರಿ ಏಳು ಸಂಸ್ಕೃತ ಪುಸ್ತಕಗಳನ್ನು ಪುರಸ್ಕಾರಕ್ಕಾಗಿ ಆಯ್ಕೆ ಮಾಡಲಾಗಿದೆ.

ನಿರ್ಣಯ: **ಸಭೆಯು ಪ್ರಶಾಸನ ಸಮಿತಿ ಎರಡನೇ ಸಭೆಯ ನಿರ್ಣಯಗಳು ಅನುಪಾಲನೆ ಆಗಿರುವುದರ ಬಗೆಗೆ ವಿವರಗಳನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

## ವಿಷಯ 2: ವೃಂದ ಮತ್ತು ನೇಮಕಾತಿ ಪರಿನಿಯಮ ಅನುಮೋದನೆ ಬಗೆಗೆ.

ಟಿಪ್ಪಣಿ: ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇಡಿ 91 ಯುಆರ್‌ಸಿ 2010, ದಿನಾಂಕ: 25.01.2011ರಂದು ಒಟ್ಟು 133 ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಸೃಜಿಸಿ ಆದೇಶಿಸಿದೆ. ಅದರಂತೆ ಯುಜಿಸಿ ಹಾಗೂ ರಾಜ್ಯ ಸರ್ಕಾರದ ನೇಮಕಾತಿ ನಿಯಮಗಳನ್ನು ಪರಿಶೀಲಿಸಿ ವಿಶ್ವವಿದ್ಯಾಲಯಕ್ಕೆ ಅನ್ವಯವಾಗುವ ಕೆಲವು ನಿಯಮಗಳನ್ನು ಸೇರ್ಪಡೆ ಮಾಡಿ ದಿನಾಂಕ: **17.06.2011**ರಂದು ಪ್ರಶಾಸನ ಸಮಿತಿ ಹಾಗೂ ಪ್ರಶಿಕ್ಷಣ ಪರಿಷತ್ತಿನ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಿದ್ಧಪಡಿಸಿ ಕಳುಹಿಸಲಾಗಿತ್ತು. ಈ ಪರಿನಿಯಮವು ಹಣಕಾಸು ಇಲಾಖೆ, ಸಿಬ್ಬಂದಿ ಆಡಳಿತ ಮತ್ತು ಸುಧಾರಣಾ ಇಲಾಖೆ ಮತ್ತು ಶಿಕ್ಷಣ ಇಲಾಖೆಯ ಅನುಮೋದನೆಯನ್ನು ಪಡೆದು ಅಂಕಿತಕ್ಕಾಗಿ ರಾಜ್ಯಪಾಲರ ಕಾರ್ಯಾಲಯಕ್ಕೆ ಕಳುಹಿಸಿತ್ತು. ದಿನಾಂಕ: 16.02.2012ರಂದು ಉನ್ನತ ಶಿಕ್ಷಣ ಇಲಾಖೆಯು ಪತ್ರ ಬರೆದು ಹಣಕಾಸು ಸಮಿತಿ, ಪ್ರಶಿಕ್ಷಣ ಪರಿಷತ್ತು ಮತ್ತು ಪ್ರಶಾಸನ ಸಮಿತಿಯಲ್ಲಿ ಅನುಮೋದನೆ ಪಡೆದು ಕಳುಹಿಸಲು ಈಗ ಸೂಚಿಸಿದೆ. ಈ ಹಿನ್ನೆಲೆಯಲ್ಲಿ ನೇಮಕಾತಿ ಪರಿನಿಯಮವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ದಿನಾಂಕ: ೨೮.೦೨.೨೦೧೨ರ ಹಣಕಾಸು ಸಮಿತಿ ಸಭೆಯ ನಡಾವಳಿ ವಿಷಯ ಸಂಖ್ಯೆ ೨ ಮತ್ತು ಪ್ರಶಿಕ್ಷಣ ಪರಿಷತ್ತಿನ ನಡಾವಳಿ ವಿಷಯ ಸಂಖ್ಯೆ ೨ರಂತೆ ಸಂಪೂರ್ಣವಾಗಿ ಪರಿಶೀಲಿಸಿ ಅನುಮೋದನೆಗೊಂಡಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಸಭೆಯು ವೃಂದ ಮತ್ತು ನೇಮಕಾತಿ ನಿಯಮವನ್ನು ಸಮಗ್ರವಾಗಿ ಪರಿಶೀಲಿಸಿತು. ಈ ಪರಿನಿಯಮವು ಈಗಾಗಲೇ ಆರ್ಥಿಕ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಪರಿಶೀಲಿಸಿರುವ ಹಿನ್ನೆಲೆಯಲ್ಲಿಯೂ 'ಡಿ' ಗ್ರೂಪ್ ಮತ್ತು ಇತರೆ ಕೆಲವು ತಾಂತ್ರಿಕ ಬೋಧಕ ಹುದ್ದೆಗಳಿಗೆ ಸಂಸ್ಕೃತಜ್ಞಾನದಿಂದ ಹೊರತುಪಡಿಸಿರುವುದನ್ನು ಸಭೆಯು ಪರಿಶೀಲಿಸಿತು. ಉಳಿದ ಎಲ್ಲಾ ಬೋಧಕ–ಬೋಧಕೇತರ ಹುದ್ದೆಗಳಿಗೆ ಸಂಸ್ಕೃತ ವಿದ್ಯಾರ್ಹತೆಯನ್ನು ನಿಗದಿಪಡಿಸಿರುವುದಕ್ಕೆ ಸಭೆಯು ಒಪ್ಪಿಗೆಯನ್ನು ನೀಡಿ ಅನುಮೋದಿಸಿತು.**

## ವಿಷಯ 3: ಪಿಎಚ್.ಡಿ. (ವಿದ್ಯಾವಾರಿಧಿ) ನಿಯಮಾವಳಿಯ ಅನುಮೋದನೆ ಬಗೆಗೆ.

ಟಿಪ್ಪಣಿ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ದಿನಾಂಕ: 03.06.2011ರಂದು ಪಿಎಚ್.ಡಿ. ಪದವಿ ವ್ಯಾಸಂಗಕ್ಕೆ ಸಂಬಂಧಿಸಿದಂತೆ ಏಕರೂಪದ ಕ್ರಮನಿಯಮಾವಳಿಯನ್ನು ಹೊರಡಿಸಿದೆ. ಈ ನಿಯಮಾವಳಿಯು ದಿನಾಂಕ: 12.04.2011ರಂದು ಜರುಗಿದ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಅನುಮೋದನೆಯನ್ನು ಪಡೆದಿದೆ. ಈ ಏಕರೂಪದ ನಿಯಮಾವಳಿಯನ್ನು ಆಯಾಯ ವಿಶ್ವವಿದ್ಯಾಲಯಗಳಲ್ಲಿ ಜಾರಿಗೆ ತರಲು ಅಗತ್ಯ ಕ್ರಮಕೈಗೊಳ್ಳಬೇಕೆಂದು ಪತ್ರದಲ್ಲಿ ಸೂಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ದಿನಾಂಕ: 09.02.2012ರಂದು ಸಭೆ ಸೇರಿ ಉನ್ನತ ಶಿಕ್ಷಣ ಪರಿಷತ್ತಿನ ಪಿಎಚ್.ಡಿ. ಪದವಿ ವ್ಯಾಸಂಗದ ಏಕರೂಪದ ಕ್ರಮನಿಯಮಾವಳಿಗೆ ಅನುಸಾರವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪಿಎಚ್.ಡಿ. ಪರಿನಿಯಮವನ್ನು ಸಿದ್ಧಪಡಿಸಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ದಿನಾಂಕ: ೨೮.೦೨.೨೦೧೨ರ ಪ್ರಶಿಕ್ಷಣ ಪರಿಷತ್ತಿನ ನಡಾವಳಿ ವಿಷಯ ಸಂಖ್ಯೆ ೩ರಂತೆ ನಿರ್ಣಯವಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಉನ್ನತ ಶಿಕ್ಷಣ ಪರಿಷತ್ತು ಹೊರಡಿಸಿರುವ ಪಿಎಚ್.ಡಿ. ನಿಯಮಾವಳಿ ಮತ್ತು ಇದನ್ನು ಅನುಸರಿಸಿ ೦೯.೦೨.೨೦೧೨ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಉಪಸಮಿತಿ ಸಭೆಯಲ್ಲಿ ಪರಿಷ್ಕರಣ ಆಗಿರುವುದನ್ನು ಸಭೆಯು ಗಮನಿಸಿತು. ೨೦೧೨–೧೩ನೇ ಸಾಲಿನಿಂದ ಪಿಎಚ್.ಡಿ. (ವಿದ್ಯಾವಾರಿಧಿ)ಯನ್ನು ಜಾರಿಗೊಳಿಸಬಹುದೆಂದು ಸಭೆಯು ಸೂಚಿಸಿ ಅನುಮೋದಿಸಿತು.**

## ವಿಷಯ 4: ಎಂ.ಫಿಲ್. ನಿಯಮ ಅನುಮೋದನೆ ಬಗೆಗೆ.

ಟಿಪ್ಪಣಿ: ದಿನಾಂಕ: 09.02.2012ರಂದು ಸಭೆ ಸೇರಿ ಎಂ.ಫಿಲ್. ನಿಯಮಾವಳಿಯನ್ನು ಇತರೆ ವಿಶ್ವವಿದ್ಯಾಲಯಗಳ ಹಾಗೂ ಉಳಿದ ರಾಜ್ಯಗಳಲ್ಲಿರುವ ಸಂಸ್ಕೃತ ವಿಶ್ವವಿದ್ಯಾಲಯಗಳ ನಿಯಮಾವಳಿಯನ್ನು ಪರಿಶೀಲಿಸಿ ನೂತನವಾಗಿ ನಿಯಮಾವಳಿಯನ್ನು ಸಿದ್ಧಪಡಿಸಿದೆ. ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ: **ದಿನಾಂಕ: ೨೮.೦೨.೨೦೧೨ರ ಪ್ರಶಿಕ್ಷಣ ಪರಿಷತ್ತಿನ ನಡಾವಳಿ ವಿಷಯ ಸಂಖ್ಯೆ ೪ರಂತೆ ನಿರ್ಣಯವಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಸಭೆಯು ಎಂ.ಫಿಲ್ (ವಿಶಿಷ್ಟಾಚಾರ್ಯ) ಪರಿನಿಯಮವನ್ನು ಪರಿಶೀಲಿಸಿತು. ೨೦೧೨–೧೩ನೇ ಸಾಲಿನಿಂದ ಅರ್ಹ ಅಭ್ಯರ್ಥಿಗಳಿಗೆ ಎಂ.ಫಿಲ್ ಪದವಿ ಅಧ್ಯಯನಕ್ಕೆ ಅವಕಾಶ ನೀಡಬಹುದೆಂದೂ ಆದಷ್ಟು ಬೇಗ ಕ್ರಮವಹಿಸಬೇಕೆಂದೂ ಸೂಚಿಸಿ ಅನುಮೋದಿಸಿತು.**

## ವಿಷಯ 5: ಡಿ.ಲಿಟ್. (ವಿದ್ಯಾವಾಚಸ್ಪತಿ) ನಿಯಮ ಅನುಮೋದನೆ ಬಗೆಗೆ.

ಟಿಪ್ಪಣಿ: ದಿನಾಂಕ: 09.02.2012ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಡಿ.ಲಿಟ್. (ವಿದ್ಯಾವಾಚಸ್ಪತಿ) ನಿಯಮಾವಳಿಯನ್ನು ಹೊಸದಾಗಿ ರೂಪಿಸಿದೆ. ಆದರೆ ಈಗಾಗಲೇ ರಾಜ್ಯಪಾಲರಿಂದ ಅಂಕಿತಗೊಂಡಿರುವ ತುಮಕೂರು

ವಿಶ್ವವಿದ್ಯಾಲಯದ ನಿಯಮಾವಳಿಯನ್ನು ಪರಿಶೀಲಿಸಿ ಅದರ ಚೌಕಟ್ಟಿನಲ್ಲಿಯೇ ಇರಿಸಲಾಗಿದೆ ಹಾಗೂ ನೂತನವಾಗಿ ವಿಶ್ವವಿದ್ಯಾಲಯಕ್ಕೆ ಹೊಂದುವಂತೆ ನಿಯಮಾವಳಿಯನ್ನು ಸಿದ್ಧಪಡಿಸಿದೆ. ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ: **ದಿನಾಂಕ: ೨೮.೦೨.೨೦೧೨ರ ಪ್ರಶಿಕ್ಷಣ ಪರಿಷತ್ತಿನ ನಡಾವಳಿ ವಿಷಯ ಸಂಖ್ಯೆ ೫ರಂತೆ ನಿರ್ಣಯವಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಸಭೆಯು ಡಿ.ಲಿಟ್ (ವಿದ್ಯಾವಾಚಸ್ಪತಿ) ಪರಿನಿಯಮವನ್ನು ಪರಿಶೀಲಿಸಿತು. ಭಾರತದ ಇತರೆ ಸಂಸ್ಕೃತ ವಿಶ್ವವಿದ್ಯಾಲಯಗಳಲ್ಲಿರುವ ಡಿ.ಲಿಟ್ ನಿಯಮಗಳ ಅನ್ವಯ ಮತ್ತು ಕರ್ನಾಟಕದ ವಿವಿಧ ವಿಶ್ವವಿದ್ಯಾಲಯದಲ್ಲಿರುವ ನಿಯಮಗಳನ್ನು ಅನ್ವಯಿಸಿ ರೂಪಿಸಿರುವ ಡಿ.ಲಿಟ್ ಪರಿನಿಯಮಕ್ಕೆ ಅನುಮೋದನೆಯನ್ನು ನೀಡಿತು. ಈ ಪರಿನಿಯಮವನ್ನು ಆದಷ್ಟು ಬೇಗ ಸರ್ಕಾರಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸಬಹುದೆಂದು ಸೂಚಿಸಿತು.**

**ವಿಷಯ 6: ಶೋಧಸಂಸ್ಥೆಗಳ ಮಾನ್ಯತಾ ಪರಿನಿಯಮ ಅನುಮೋದನೆ ಬಗೆಗೆ.**

ಟಿಪ್ಪಣಿ: ಶೋಧಸಂಸ್ಥೆಗಳ ಮಾನ್ಯತಾ ಪರಿನಿಯಮಾವಳಿಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧಿನಿಯಮ ಮತ್ತು ಪರಿಷ್ಕೃತಗೊಳ್ಳುತ್ತಿರುವ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕರಡು ಪರಿನಿಯಮದ ಹಿನ್ನೆಲೆಯಲ್ಲಿ ಹಾಗೂ ಇತರೆ ವಿಶ್ವವಿದ್ಯಾಲಯಗಳ ಶೋಧಸಂಸ್ಥೆಗಳ ಮಾನ್ಯತಾ ಪರಿನಿಯಮಾವಳಿಯನ್ನು ಗಮನಿಸಿ ಹೊಸದಾಗಿ ಸಿದ್ಧಪಡಿಸಲಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ: **ದಿನಾಂಕ: ೨೮.೦೨.೨೦೧೨ರ ಪ್ರಶಿಕ್ಷಣ ಪರಿಷತ್ತಿನ ನಡಾವಳಿ ವಿಷಯ ಸಂಖ್ಯೆ ೬ರಂತೆ ನಿರ್ಣಯವಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಸಭೆಯು ಶೋಧಸಂಸ್ಥೆಗಳ ಮಾನ್ಯತಾ ಪರಿನಿಯಮವನ್ನು ಪರಿಶೀಲಿಸಿ ಅನುಮೋದನೆ ನೀಡಿತು. ಈ ಪರಿನಿಯಮವನ್ನು ಸರ್ಕಾರದ ಅಂಕಿತಕ್ಕಾಗಿ ಕಳುಹಿಸಬಹುದೆಂದು ಅಭಿಪ್ರಾಯ ನೀಡಿತು.**

## ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು:

**ವಿಷಯ 1: ದಿನಾಂಕ: 28.02.2012ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿ ಅನುಮೋದನೆ ಬಗೆಗೆ.**

ಟಿಪ್ಪಣಿ: ದಿನಾಂಕ: 28.02.2012ರ ಮಂಗಳವಾರ ನಡೆದ ಹಣಕಾಸು ಸಮಿತಿಯ ಸಭೆಯಲ್ಲಿ 2011–12ನೇ ಸಾಲಿನ ಮೂರನೇ ತ್ರೈಮಾಸಿಕ (ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್)ದ ವಿಶ್ವವಿದ್ಯಾಲಯದ ಹಣಕಾಸು ವ್ಯವಹಾರಗಳನ್ನು, ಜಮಾ–ಖರ್ಚು ವಿವರಗಳನ್ನು ಪರಿಶೀಲಿಸಲಾಯಿತು. ಆ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿ ಅನುಮೋದನೆಗಾಗಿ ಇರಿಸಲಾಗಿದೆ.

ನಿರ್ಣಯ: **ಹಣಕಾಸು ಸಮಿತಿಯ ಮೂರನೇ ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 2: ದಿನಾಂಕ: 28.02.2012ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ಸಭೆಯ ನಡಾವಳಿ ಅನುಮೋದನೆ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ಮೂರನೆಯ ಸಭೆಯು ದಿನಾಂಕ: ಫೆಬ್ರವರಿ 28, 2012ರ ಮಂಗಳವಾರ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯಲ್ಲಿ ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಪಟ್ಟ ಹಲವು ವಿಷಯಗಳ ಬಗೆಗೆ ವಿಸ್ತೃತವಾದ ಚರ್ಚೆಯನ್ನು ನಡೆಸಿ ಪ್ರಶಿಕ್ಷಣ ಪರಿಷತ್ತಿನ ಅನುಮೋದನೆಯನ್ನು ಪಡೆಯಲಾಯಿತು. ಈ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಪ್ರಶಿಕ್ಷಣ ಪರಿಷತ್ತಿನ ಮೂರನೇ ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 3: ಘಟಕ ಕಾಲೇಜುಗಳ ಪರಿನಿಯಮ ಅನುಮೋದನೆ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಅಸ್ತಿತ್ವಕ್ಕೆ ಬಂದ ನಂತರದಲ್ಲಿ, ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ ಇಡಿ 173 ಯುಆರ್‌ಸಿ 2010, ದಿನಾಂಕ 1.4.2011 ರಲ್ಲಿ ಸರ್ಕಾರಿ ಸಂಸ್ಕೃತ ಕಾಲೇಜುಗಳಾದ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು ಹಾಗೂ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು –ಇವುಗಳನ್ನು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳನ್ನಾಗಿ ಘೋಷಿಸಲಾಗಿದ್ದು, ಇವುಗಳ ವಿಲೀನಿಕರಣಕ್ಕೆ ಸಂಬಂಧಿಸಿದಂತೆ ಘಟಕ ಕಾಲೇಜುಗಳ ಪರಿನಿಯಮವನ್ನು ರಚಿಸಲಾಗಿದೆ. ಪ್ರಶಾಸನ ಸಮಿತಿ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ದಿನಾಂಕ: ೨೮.೦೨.೨೦೧೨ರ ಪ್ರಶಿಕ್ಷಣ ಪರಿಷತ್ತಿನ ನಡಾವಳಿಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ವಿಷಯ ಸಂಖ್ಯೆ ೫ರಂತೆ ನಿರ್ಣಯವಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಸಭೆಯು ಘಟಕ ಕಾಲೇಜುಗಳ ಪರಿನಿಯಮಕ್ಕೆ ಒಪ್ಪಿಗೆ ನೀಡಿತು ಮತ್ತು ಆದಷ್ಟು ಬೇಗ ಸರ್ಕಾರಕ್ಕೆ ಪರಿನಿಯಮವನ್ನು ಕಳುಹಿಸಲು ಅನುಮೋದಿಸಿತು.**

**ವಿಷಯ 4: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಘಟಕ ಕಾಲೇಜುಗಳ ಚರ–ಸ್ಥಿರಾಸ್ತಿಗಳನ್ನು ವಹಿಸಿಕೊಡುವ ಕುರಿತು.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ ಇಡಿ 173 ಯುಆರ್‌ಸಿ 2010, ದಿನಾಂಕ 1.4.2011 ರಲ್ಲಿ ಸರ್ಕಾರಿ ಸಂಸ್ಕೃತ ಕಾಲೇಜುಗಳಾದ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು ಹಾಗೂ ಶ್ರೀಮನ್‌ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು ಇವುಗಳನ್ನು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳನ್ನಾಗಿ ಘೋಷಿಸಲಾಗಿದ್ದು, ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ ಇಡಿ 87 ಯುಪಿಸಿ

2010, ದಿನಾಂಕ 15.10.2010ರಲ್ಲಿ ಮೇಲ್ಕಂಡ ಸಂಸ್ಕೃತ ಕಾಲೇಜುಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳನ್ನು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಇದೀಗ ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಸರ್ಕಾರದ ನಡಾವಳಿ ಸಂಖ್ಯೆ ಇಡಿ 358 ಯುಆರ್‌ಸಿ 011, ಬೆಂಗಳೂರು, ದಿನಾಂಕ 27.2.2012ರಲ್ಲಿ ಘಟಕ ಕಾಲೇಜುಗಳ ಸಂಪೂರ್ಣ ಸ್ತಿರಾಸ್ಥಿ, ಚರಾಸ್ಥಿಗಳನ್ನು ವರ್ಗಾಯಿಸಿರುತ್ತಾರೆ.

ನಿರ್ಣಯ: **ದಿನಾಂಕ: ೨೮.೦೨.೨೦೧೨ರ ಪ್ರಶಿಕ್ಷಣ ಪರಿಷತ್ತಿನ ನಡಾವಳಿಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ವಿಷಯ ಸಂಖ್ಯೆ ೬ರಂತೆ ನಿರ್ಣಯವಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು ಮತ್ತು ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜುಗಳ ಚರ–ಸ್ಥಿರಾಸ್ತಿಗಳನ್ನು ವಿಶ್ವವಿದ್ಯಾಲಯಕ್ಕೆ ಕರ್ನಾಟಕ ಸರ್ಕಾರದ ನಡಾವಳಿ ಮೂಲಕ ದಿನಾಂಕ: ೨೭.೦೨.೨೦೧೨ರಂದು ಆದೇಶ ಹೊರಡಿಸಿರುವುದಕ್ಕೆ ಸಭೆಯು ಸಂತೋಷ ಸೂಚಿಸಿತು. ಆದಷ್ಟು ಬೇಗ ವಿಶ್ವವಿದ್ಯಾಲಯದ ಹೆಸರಿಗೆ ಖಾತಾ ಪರಿವರ್ತನೆ ಮಾಡಿಕೊಳ್ಳುವ ಪ್ರಕ್ರಿಯೆ ಬೇಗನೆ ಆಗಬೇಕೆಂದು ಸೂಚಿಸಿ ಅನುಮೋದಿಸಿತು.**

**ವಿಷಯ 5: ದಿನಾಂಕ: 29.02.2012ರಂದು ನಡೆದ ಪದೋನ್ನತಿ ಪರಿಶೀಲನಾ ಸಮಿತಿ ಸಭೆಯ ನಡಾವಳಿ ಅನುಮೋದನೆ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪದೋನ್ನತಿ ಪರಿಶೀಲನಾ ಸಮಿತಿ ಸಭೆಯು ದಿನಾಂಕ: ಫೆಬ್ರವರಿ 29, 2012ರ ಬುಧವಾರ ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯಲ್ಲಿ ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಬೆಂಗಳೂರು ಇಲ್ಲಿನ ನಾಲ್ವರು ಸಹಾಯಕ ಪ್ರಾಧ್ಯಾಪಕರಿಗೆ ಪ್ರಾಧ್ಯಾಪಕರ ಸ್ಥಾನಕ್ಕೆ ಮುಂಬಡ್ತಿ ನೀಡಲಾಗಿದ್ದನ್ನು ಘಟನೋತ್ತರವಾಗಿ ಅನುಮೋದಿಸಿ, ಎಸ್.ಎಂಎಸ್.ಪಿ. ಕಾಲೇಜು, ಉಡುಪಿ ಹಾಗೂ ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಆದಿಚುಂಚನಗಿರಿ –ಇಲ್ಲಿಯ ಇಬ್ಬರು ಬೋಧಕೇತರ ಸಿಬ್ಬಂದಿಗಳನ್ನು ದ್ವಿ.ದ.ಸ. ಹುದ್ದೆಯಿಂದ ಪ್ರ.ದ.ಸ. ಹುದ್ದೆಗೆ ಪದೋನ್ನತಿಗೊಳಿಸಿದ್ದನ್ನು ಘಟನೋತ್ತರವಾಗಿ ಅನುಮೋದಿಸಲಾಗಿದೆ ಹಾಗೂ ಪದೋನ್ನತಿಗೆ ಬಾಕಿ ಇದ್ದ ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು, ಉಡುಪಿ ಇಲ್ಲಿಯ ಓರ್ವ ಉಪನ್ಯಾಸಕ ಹಾಗೂ ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು ಇಲ್ಲಿಯ ಓರ್ವ ಉಪನ್ಯಾಸಕರ ಮುಂಬಡ್ತಿ ಹಾಗೂ ಪೂರ್ಣಪ್ರಜ್ಞ ವಿದ್ಯಾಪೀಠದ ಪ್ರಾಚಾರ್ಯರ ವೇತನ ಬಡ್ತಿಯನ್ನು ಸಭೆ ಸರ್ವಾನುಮತದಿಂದ ಒಪ್ಪಿರುತ್ತದೆ. ಈ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ದಿನಾಂಕ: 29.02.2012ರಂದು 'ಪದೋನ್ನತಿ ಪರಿಶೀಲನಾ ಸಮಿತಿ' ಸಭೆ ನಡೆಯಿತು. ಈಗಾಗಲೇ ಘಟನೋತ್ತರವಾಗಿ ಅನುಮೋದಿಸಿರುವ ಹುದ್ದೆಗಳಿಗೆ ಒಪ್ಪಿಗೆಯನ್ನು ನೀಡಿ, ಅನಂತರ ವಿದ್ವಾನ್ ಸತ್ಯನಾರಾಯಣ ವೆಂಕಟರಾವ್, ಸಹಾಯಕ ಪ್ರಾಧ್ಯಾಪಕರು, ನವೀನನ್ಯಾಯ, ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು, ಉಡುಪಿ, ಕೆ. ವಿಷ್ಣುಮೂರ್ತಿ ಮಂಜಿತ್ತಾಯ, ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು ಮತ್ತು ವಿದ್ವಾನ್ ಎ. ಹರಿದಾಸ ಭಟ್ಟ, ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು – ಈ ಮೂವರಿಗೂ ಪದೋನ್ನತಿ ನೀಡಿರುವುದನ್ನು ಸಭೆಯು ಸಮಗ್ರವಾಗಿ ಪರಿಶೀಲಿಸಿ ಅನುಮೋದಿಸಿತು. ಈ ಎಲ್ಲಾ ಹುದ್ದೆಗಳು ಆರ್ಥಿಕ ವ್ಯತ್ಯಯಗಳಿಗೆ ಅವಕಾಶ ನೀಡದೇ ಇರುವುದರಿಂದ ಇವರೆಲ್ಲರೂ ವಿದ್ಯಾರ್ಹತೆ ಹಾಗೂ ಸೇವಾ ಜ್ಯೇಷ್ಠತೆ ಆಧಾರದಲ್ಲಿ ಖಾಲಿ ಇರುವ ಹುದ್ದೆಗೆ ಎದುರಾಗಿ ಪದೋನ್ನತಿಯನ್ನು ನೀಡಬಹುದೆಂದು ಸಭೆಯು ವಿವರವಾಗಿ ಪರಿಶೀಲಿಸಿ ತನ್ನ ಅನುಮೋದನೆಯನ್ನು ನೀಡಿತು.**

**ಪ್ರೊ. ವೈ.ಎಸ್. ಸಿದ್ದೇಗೌಡ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು